ಕಲಿಯೋದು, ಸ್ಫೂರ್ತಿ ತೆಗೆದುಕೊಳ್ಳೋದು... ಹೀಗೆ ನಿರಂತರ ನಡೆಯುತ್ತಲೇ ಇದೆ. ಈ ಅನುಭವಗಳೇ ಸವಾಲು.

◆ **ಸಂಗೀತ ಮಾಂತ್ರಿಕ ಇಳಯರಾಜ ಅವರ ಸಂಗೀತ ನಿಮ್ಮ ಸಿನಿಮಾಗೆ ಸಿಕ್ಕಿದೆ. ಈ ಅವಕಾಶ ಸಾಧ್ಯವಾದದ್ದು ಹೇಗೆ?**

2023ರ ನವೆಂಬರ್‌ನಲ್ಲಿ ಇಳಯರಾಜ ಸರ್ ಭೇಟಿಯಾಗಲು ಅವಕಾಶ ಸಿಕ್ಕಿತು. ಸುಮ್ಮನೆ ಅವರನ್ನು ಭೇಟಿ ಆಗಲು ಹೋಗಿದ್ದು, ಸಿನಿಮಾ ವಿಷಯಕ್ಕಲ್ಲ. ಅವರನ್ನು ಭೇಟಿಯಾದ ಸಂಗತಿ ಜೀವನದ ಒಂದು ಸುಂದರ ಕ್ಷಣ ಆಗಬೇಕೆಂದುಕೊಂಡೆ. ಆದರೆ ಇನ್ನೂ ದೊಡ್ಡ 'ಲೈಫ್ ಟೈಂ ಮೆಮೊರಿ' ಆಗಿ ಮಾರ್ಪಟ್ಟಿತು.

ಅವರಿಗೆ ನನ್ನ ಸಿನಿಮಾ ಕಥೆ ಹೇಳಿದೆ. ಕಥೆ ಕೇಳಿಸಿಕೊಂಡರು. ಅದು ಅವರಿಗೆ ತುಂಬಾ ಇಷ್ಟವಾಯಿತು. ಅವರು ಸಂಗೀತ ನೀಡುತ್ತೇನೆ ಎಂದಾಗಿನಿಂದ ಸಿನಿಮಾ ಬಗ್ಗೆ ಪಾಸಿಟಿವ್ ವೈಬ್ ಬಂದಿದೆ. ನಿರ್ದೇಶಕಿಯಾಗಿ ನನ್ನ ಮೊದಲ ಹೆಜ್ಜೆಗೆ ಅವರು ಜೊತೆಯಾದದ್ದು ನನ್ನ ಪುಣ್ಯ. ನನಗೆ ಸಿನಿಮಾ ಬಗ್ಗೆ ವಿಶ್ವಾಸವೂ ಜಾಸ್ತಿ ಆಗಿದೆ. ಸಿನಿಮಾವನ್ನು ಇನ್ನಷ್ಟು ಗಂಭೀರವಾಗಿ ತೆಗೆದುಕೊಂಡು ಹೋಗಬೇಕು ಎನಿಸಿದೆ.

◆ **ಯಾವ್ಯಾವ ರೀತಿಯ ಸಿನಿಮಾ ಮಾಡಬೇಕೆನ್ನುವ ಆಸೆಯಿದೆ?**

ನಮ್ಮ ನೆಲಕ್ಕೆ, ನಮ್ಮ ಸಮಾಜಕ್ಕೆ ಹತ್ತಿರವಾಗಿರುವಂಥ ಕಥೆಯನ್ನು ಹೇಳಿದಾಗ ಅದು ತುಂಬಾ ಪ್ರಸ್ತುತ ಅನ್ನಿಸುತ್ತೆ. ನಮಗೆ ಕೆಲವೊಂದು ವಿಷಯದ ಬಗ್ಗೆ ಒಂದು ಭಾವನೆ ಬೆಳೆದುಕೊಂಡಿರುತ್ತದೆ. ಆ ಭಾವನೆಯನ್ನು ಇನ್ನೊಂದು ದೃಷ್ಟಿಕೋನದಲ್ಲಿ ಹೇಳಿದಾಗ, ಇಲ್ಲವೇ ಗೊತ್ತಿಲ್ಲದ್ದನ್ನು ಹೇಳಿದಾಗ ಜನರಿಗೆ ಇನ್ನೂ ಹತ್ತಿರವಾಗುತ್ತೇವೆ ಅನಿಸುತ್ತೆ. ಸಿನಿಮಾ, ಸಮಾಜಕ್ಕೆ ಬೇಕಾಗಿರುವ ಕಥೆಯೂ ಆಗಿರಬೇಕು.

◆ **ನಟನೆ ಕೆಲಸ ಹೇಗೆ ನಡೆಯುತ್ತಿದೆ?**

ಸದ್ಯ ನಟನೆ ನಿಂತಿದೆ. ನಿರ್ದೇಶನದಲ್ಲಿ ತುಂಬಾ ಕೆಲಸ ಇರುವುದರಿಂದ ಬೇರೆ ಯಾವುದೇ ಪ್ರಾಜೆಕ್ಟ್ ತೆಗೆದುಕೊಳ್ಳಲಿಲ್ಲ.

ನನಗೆ ಸವಾಲು ಅನ್ನಿಸುವ ವಿಷಯ ತೆಗೆದುಕೊಳ್ಳಬೇಕು ಎನಿಸಿದ್ದರಿಂದ ನಟನೆಯಿಂದ ನನ್ನ ಹಾದಿ ಹೊರಳಿಸಿದೆ. ನನ್ನದು ಈವರೆಗೂ ಐದು ಸಿನಿಮಾ ಬಿಡುಗಡೆಯಾಗಿದೆ. ಒಳ್ಳೊಳ್ಳೆಯ ಪಾತ್ರಗಳನ್ನು ಮಾಡಿದ್ದೀನಿ. ಟೀವಿ ಶೋ ಯಶಸ್ವಿಯಾಯಿತು. ಮತ್ತೆ ಅದೇ ಒಂದು ವೃತ್ತದಲ್ಲಿ ಹೋಗಬೇಕು ಅನ್ನಿಸಲಿಲ್ಲ. ಆದರೆ ಬದಲಾವಣೆ ಬಯಸಿದಾಗ ಅದಕ್ಕೆ ತಕ್ಕ ತಯಾರಿಯೂ ಬೇಕಿರುತ್ತದೆ. ಆ ತಯಾರಿಯೊಂದಿಗೆ ಈಗ ನಿರ್ದೇಶನಕ್ಕೆ ಇಳಿದಿದ್ದೇನೆ. ■

# ಮಾಸ್ ಪಾತ್ರದಲ್ಲಿ ಧರ್ಮ

**ಈ**ಚೆಗೆ 'ಬಿಗ್ ಬಾಸ್' ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದ ನಟ ಧರ್ಮ ಕೀರ್ತಿರಾಜ್ ಅಭಿನಯದ 'ತಲ್ವಾರ್' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದ್ದು, ಅದರಲ್ಲಿ ಧರ್ಮ ಮಾಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



ರೌಡಿಸಂ ಹಾಗೂ ಸಂಬಂಧಗಳ ಸುತ್ತ ನಡೆಯುವ ಕಥೆ ಇದಾಗಿದ್ದು, ಧರ್ಮ ಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ. ಈ ಸಿನಿಮಾದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಮಮ್ಮಾಜ್' ಚಿತ್ರ ನಿರ್ದೇಶಿಸಿದ್ದ ಮುರಳಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಸಿನಿಮಾ ಬಗ್ಗೆ ಮಾತನಾಡಿರುವ ಧರ್ಮ, 'ಇದೊಂದು ಆ್ಯಕ್ಷನ್ ಹಾಗೂ ಮದರ್ ಸೆಂಟಿಮೆಂಟ್ ಹೊಂದಿರುವ ಚಿತ್ರ. ಇದರಲ್ಲಿ ನನ್ನ ಪಾತ್ರ ವಿಭಿನ್ನವಾಗಿದೆ. ನನಗಿದು ವಿಶೇಷ ಸಿನಿಮಾ ಎನ್ನಬಹುದು. ದುಡ್ಡಿಗಾಗಿ ಏನನ್ನಾದರೂ ಮಾಡಲು ಸಿದ್ಧವಾಗಿರುವ ಹುಡುಗನ ಪಾತ್ರ ನನ್ನದು. ತನ್ನ ಬದುಕಿನ ಕುರಿತು ಪಶ್ಚಾತ್ತಾಪ ಪಡುವ ಆ ಹುಡುಗ ಮುಂದೇನು ಮಾಡುತ್ತಾನೆ ಎಂಬುದನ್ನು ಈ ಸಿನಿಮಾ ಮೂಲಕ ಹೇಳಿದ್ದೇವೆ' ಎಂದಿದ್ದಾರೆ.

'ಟಚ್‌ಸ್ಟೋನ್ ಪಿಕ್ಚರ್ಸ್' ಬ್ಯಾನರ್ ಅಡಿಯಲ್ಲಿ ಛಾಯಾಚಿತ್ರಗ್ರಾಹಕ ಸುರೇಶ್ ಭೈರಸಂದ್ರ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನೈಜಘಟನೆ ಇಟ್ಟುಕೊಂಡು ರೂಪಿತವಾಗಿರುವ ಈ ಸಿನಿಮಾ ಬಿಡುಗಡೆಗೆ ಸಿದ್ಧವಿದ್ದು ಶೀಘ್ರದಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ. ಧರ್ಮ ಕೀರ್ತಿರಾಜ್ ಜೊತೆ ನಾಯಕಿಯಾಗಿ ಅದಿತಿ ಕಾಣಿಸಿಕೊಂಡಿದ್ದಾರೆ. ■

# ಕಂಟೆಂಟ್ ಈಸ್ ಕಿಂಗ್ ಗಣೇಶ್ ಉವಾಚ

'ಜನರ ನಡುವೆ ಕುಳಿತು ನನ್ನ ನೆಚ್ಚಿನ ನಟ ನಟಿಯರ ಸಿನಿಮಾ ನೋಡುತ್ತಿದ್ದವ ನಾನು. ಹೀಗಾಗಿ ಜನರಿಗೆ ಏನು ಬೇಕು ಎಂಬುದು ನನಗೆ ಗೊತ್ತಿದೆ' ಎಂದಿದ್ದಾರೆ ನಟ ಗಣೇಶ್. ಈಚೆಗೆ ತೆರೆಕಂಡ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದಲ್ಲಿ ಗೆಲುವು ಕಂಡಿರುವ ಗಣೇಶ್, ಸದ್ಯ ಮತ್ತೊಂದು ದೊಡ್ಡ ಸಿನಿಮಾಗೆ ಅಣಿಯಾಗುತ್ತಿದ್ದಾರೆ. ಹೊಸಬರೊಂದಿಗೆ ಕೆಲಸ ಮಾಡುವ ಉತ್ಸುಕತೆಯನ್ನೂ ವ್ಯಕ್ತಪಡಿಸಿದ್ದಾರೆ.



'ಆಗ ಥಿಯೇಟರ್‌ನಲ್ಲಿ ಕುಳಿತು ನನ್ನ ನೆಚ್ಚಿನ ನಟ ನಟಿಯರನ್ನು ನೋಡಿ ಶಿಳ್ಳೆ ಹೊಡೆದು ಚಪ್ಪಾಳೆ ತಟ್ಟುತ್ತಿದ್ದೆ. ಹೀಗಾಗಿ ಪ್ರೇಕ್ಷಕರಿಗೆ ಏನು ಹಿಡಿಸುತ್ತದೆ ಎಂಬುದರ ಫಸ್ಟ್‌ಹ್ಯಾಂಡ್ ಮಾಹಿತಿ ನನಗಿದೆ. ನನಗೆ ಪರಿಶ್ರಮದಲ್ಲಿ ನಂಬಿಕೆ ಇದೆ. ಇದರೊಂದಿಗೆ ಅದೃಷ್ಟವೂ ಬೇಕಿದೆ' ಎಂದು ಹೇಳಿದ್ದಾರೆ.

ಸಿನಿಮಾರಂಗದ ಮಜಲುಗಳ ಬಗ್ಗೆ ಮಾತನಾಡುತ್ತಾ, ''ಹಲವು ಹಂತಗಳನ್ನು ಸಿನಿಮಾರಂಗ ಕಂಡಿದೆ. ಆದರೆ ಈ ಎಲ್ಲಾ ಹಂತಗಳಲ್ಲೂ ಕಥೆಯೇ ಮುಖ್ಯ ಎಂಬುದು ನಿರೂಪಿತವಾಗಿದೆ. ಸಿನಿಮಾರಂಗ ಹೇಗೇ ಬದಲಾಗಲಿ, ಉತ್ತಮ ಸಿನಿಮಾ ತನ್ನ ಪ್ರೇಕ್ಷಕರನ್ನು ಗಳಿಸಿಕೊಳ್ಳುವುದು ಶತಸಿದ್ಧ. 2024ರಲ್ಲಿ ಕೆಲವು ಸಿನಿಮಾಗಳು ಜನರನ್ನು ಥಿಯೇಟರ್‌ಗೆ ಕರೆತಂದವು. 'ಕಂಟೆಂಟ್ ಈಸ್ ಕಿಂಗ್' ಎನ್ನುವುದು ಪದೇ ಪದೇ ಸಾಬೀತಾಗುತ್ತಿದೆ'' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಹೊಸಬರೊಂದಿಗೆ ಕೆಲಸ ಮಾಡಲು ನಾನು ಸಿದ್ಧ. ಈಚೆಗೆ ಹೊಸಬರೊಬ್ಬರಿಂದ ಸ್ಕ್ರಿಪ್ಟ್ ಕೇಳಿದೆ. ಅದು ಹೇಗೆ ಆಕಾರ ಪಡೆದುಕೊಳ್ಳಲಿದೆ ಕಾದು ನೋಡಬೇಕಿದೆ' ಎಂದಿದ್ದಾರೆ. ■